INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -4, November-December, 2021,
PageNo,27-38
Peer Reviewed Journal, Referred Journal

# ವಡ್ಡಾರಾಧನೆಯಲ್ಲಿ ಕಂಡು ಬರುವ ಕುಟುಂಬ ಮತ್ತು ವಿವಾಹದ ಪರಿಕಲ್ಪನೆಗಳು

**ರವಿ.ಡಿ.**[1]

ಕನ್ನಡದ ಮೊಟ್ಟ ಮೊದಲ ಗದ್ಯದ ಕೃತಿ ಎಂದರೆ, ಅದುವೇ ವಡ್ಡಾರಾಧನೆಯೇ ಆಗಿರುತ್ತದೆ. ಈ ಗ್ರಂಥವು ಶಿವಕೋಟ್ಯಾಚಾರ್ಯ ಎಂಬಂತಹ ಜೈನ ವಿದ್ವಾಂಸನಿಂದ ರಚಿತವಾಗಿದೆ. ಈ ಕೃತಿಯಲ್ಲಿ ಒಟ್ಟು 19 ಕಥೆಗಳಿವೆ. ಆದ್ದರಿಂದಲೇ ಈ ಕೃತಿಯನ್ನು **'ಉಪಸರ್ಗ ಕೇವಲಿಗಳ'** ಕಥೆ ಎಂದು ಕೂಡ ಕರೆಯಲಾಗುತ್ತದೆ. ಮತ್ತೇ, ಈ ಕೃತಿಯು ಸರಿಸುಮಾರು ಕ್ರಿ.ಶ 920ರಲ್ಲಿ ರಚಿಸಿರಬೇಕೆಂದು ಕೆಲವು ವಿದ್ವಾಂಸರು ತಮ್ಮದೇ ಆದಂತಹ ಅಭಿಪ್ರಾಯವನ್ನು ಕೂಡ ವ್ಯಕ್ತಪಡಿಸಿದ್ದಾರೆ. ಈಎಲ್ಲಾ ಅಂಶಗಳಿಂದಲೂ ವಡ್ಡಾರಾಧನೆಯ ಗ್ರಂಥದ ಕೃರ್ತವು ಜನಸಾಮಾನ್ಯರ ನಡುವೆ ಬಾಳ ಸಮಾಜದ ಎಲ್ಲ ಆಗು ಹೋಗುಗಳನ್ನು ಬಹುಸೂಕ್ಷ್ಮವಾಗಿಯೇ ಕಂಡುಕೊಂಡಿದ್ದಾರೆ. ಆದ್ದರಿಂದಲೇ ಅರಮನೆಯಿಂದ – ಗುರುಮನೆಯವರೆಗೆ, ರಾಜನಿಂದ – ರಾಜರ್ಷಿಯವರೆಗೆ, ಲಕ್ಷಾಧಿಪತಿಯಿಂದ – ಭಿಕ್ಷಾಧಿಪತಿಯವರೆಗೆ ಇರುವ ವಿವಿಧ ಸ್ತರಗಳ ಜನರ ಜೀವನವನ್ನು ತನ್ನ ಕೃತಿಯಲ್ಲಿ ಹಾಸುಹೊಕ್ಕಾಗಿಸಿದ್ದಾರೆ. ಇದರಿಂದಾಗಿಯೇ ಈ ಕೃತಿಯಲ್ಲಿ ಜನರ ಆಚಾರ–ವಿಚಾರ. ಅವರು ಆಚರಿಸುವ ಹಬ್ಬ–ಹರಿದಿನಗಳು, ಅವರಲ್ಲಿದ್ದ ನಂಬಿಕೆ ಸಂಪ್ರದಾಯಗಳು, ಅವರು ಅನುಸರಿಸುತ್ತಿದ್ದ ವೃತ್ತಿಗಳು, ಆ ಕಾಲದ ವಿದ್ಯಾಭ್ಯಾಸ ಇವೇ ಮೊದಲಾದ ಹಲವಾರು ಸಾಂಸ್ಕೃತಿಕ–ಸಾಮಾಜಿಕ ಅಂಶಗಳ ಅಧ್ಯಯನಕ್ಕೆ ವಡ್ಡಾರಾಧನೆ ಒಂದು ಮಹತ್ವದ ಆಕರ ಕೃತಿಯಾಗಿದೆ.

ವಡ್ಡಾರಾಧನೆಯು ತನ್ನ ಒಡಲಿನಲ್ಲಿ ಪ್ರಾಸಂಗಿಕವಾಗಿ ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡಿದೆ. ಈ ಗ್ರಂಥದಲ್ಲಿ ಕಂಡುಬರುವ ಎಲ್ಲಾ ವಿಚಾರಗಳು ಕನ್ನಡ ನಾಡಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳೆಂದು ಹೇಳಲಾಗದು. ಏಕೆಂದರೆ, ಈ ಕೃತಿಯ ಹತ್ತೊಂಬತ್ತು ಕಥೆಗಳು ಪರಂಪರೆಯಿಂದ ಹರಿದು ಬಂದವುಗಳು. ಜೊತೆಯಲ್ಲಿ ಸೇರಿದ ಸಮಕಾಲೀನ ಸಾಂಸ್ಕೃತಿಕ ಲೋಕವನ್ನು ಪರಂಪರೆಯಿಂದ ಬಂದ ಉಲ್ಲೇಖದಿಂದ ಪ್ರತ್ಯೇಕಿಸಿ ಹೇಳುವುದು ಕಷ್ಟದ ಕೆಲಸ. ಈ ಒಂದು ವಿಷಯವನ್ನು

---

1. **ಸಂಶೋಧಕರು**, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.

ಆಧಾರವಾಗಿಟ್ಟುಕೊಂಡೇ ವಡ್ಡಾರಾಧನೆಯಲ್ಲಿ ಕಂಡುಬರುವ ಸಾಂಸ್ಕೃತಿಕ ಅಂಶಗಳಾದ **ಕುಟುಂಬ ಮತ್ತು ವಿವಾಹದ** ಪರಿಕಲ್ಪನೆಗಳ ಬಗೆಗೆ ಈ ಮುಂದಿನಂತೆ ಲೇಖನದಲ್ಲಿ ಸ್ಥೂಲವಾಗಿ ವಿಶ್ಲೇಷಿಸಲಾಗಿದೆ.

**ವಡ್ಡಾರಾಧನೆಯಲ್ಲಿನ ಕುಟುಂಬ ಪರಿಕಲ್ಪನೆ**

ಕುಟುಂಬವು ಒಂದು ಸಾರ್ವತ್ರಿಕವಾದ ಸಂಸ್ಥೆಯಾಗಿದೆ. ಅದು ಅತ್ಯಂತ ಸರಳವಾದ ಹಾಗೂ ಸೂಕ್ಷ್ಮವಾದ ಸಮಾಜವಿದ್ದಂತೆ, ಕುಟುಂಬವಿಲ್ಲದೆ ಸಮಾಜವಿಲ್ಲ. ಅದು ಮಾನವನ ಸಾಮಾಜಿಕ ಜೀವನದ ತಳಹದಿಯಾಗಿದೆ. ಕುಟುಂಬವೇ ಮಗುವಿನ ಪ್ರಥಮ ಸಾಮಾಜಿಕ ಪರಿಸರ ಸಮೂಹವೇ ಆಗಿರುತ್ತದೆ. ನವಜಾತ ಶಿಶುವಿಗೆ ಸಂಸ್ಕಾರ ನೀಡುವುದು, ಶಿಕ್ಷಣ ಕೊಡುವುದು, ಅವನನ್ನು ಸಮಾಜದ ಜವಾಬ್ದಾರಿಯ ಪ್ರಜೆಯನ್ನಾಗಿ ಮಾಡುವುದು ಕುಟುಂಬ. ಕುಟುಂಬದ ಪ್ರಕಾರ ಯಾವುದಿದ್ದರೂ ಅದು ನಾಗರಿಕ–ಅನಾಗರಿಕ, ಸುಸಂಸ್ಕೃತ – ಅಸಂಸ್ಕೃತ, ಮುಂದುವರೆದ – ಹಿಂದುಳದ ಆದಿವಾಸಿ ಆಧುನಿಕ ಎಂಬ ಭೇದವಿಲ್ಲದೆ ಎಲ್ಲಾ ಸಮಾಜಗಳಲ್ಲಿಯೂ ಕಾಣುವುದು. ಮಾನವನ ಅತಿಮುಖ್ಯವಾದ 3 ಅಗತ್ಯಗಳಾದ ಲೈಂಗಿಕ ತೃಪ್ತಿ, ಸಂತಾನಾಭಿಲಾಷೆ ಮತ್ತು ಆರ್ಥಿಕ ಬಯಕೆಗಳೇ ಕುಟುಂಬದ ಸಾರ್ವತ್ರಿಕತೆಗೆ ಕಾರಣವೇ ಆಗಿರುತ್ತದೆ.

ವಡ್ಡಾರಾಧನೆ ಕೃತಿಯ ಕಾಲದಲ್ಲಿ ಸಮಾಜದ ಮುಖ್ಯ ಅಂಗವಾಗಿ ಕುಟುಂಬ ವ್ಯವಸ್ಥೆಯು ಕಂಡುಬರುತ್ತದೆ. ಇಲ್ಲಿನ ಕುಟುಂಬ ವ್ಯವಸ್ಥೆಯು ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಾಗಿದ್ದು, ಕುಟುಂಬದಲ್ಲಿ ಸಾಮಾನ್ಯವಾಗಿ ತಂದೆಯೇ ಯಜಮಾನನಾಗಿದ್ದು ತಂದೆ, ತಾಯಿ, ಮಕ್ಕಳು, ಸೊಸೆ ಮತ್ತು ಅಳಿಯ ಇನ್ನು ಮುಂತಾದವರು ಜೊತೆಯಲ್ಲಿ ಕೂಡಿ ಬಾಳುತ್ತಿದ್ದರು. "ಮಗಂ ಪುಟ್ಟಿದೊಂ ತಾಯ್ಗಂ ತಂದೆಗಮೆಲ್ಲಾನಂಟರ್ಗೆಯುತ್ಸಾಹಮುಂ ಸುಖಮುಂ ವಿಭವಮುಮಂ ಪಡೆವುದಱಿಂದಮಾ" ಅಂದರೆ ಕುಟುಂಬದಲ್ಲಿ ಮಗು ಜನಿಸಿದರೆ ತಂದೆ–ತಾಯಿ ಬಂಧು–ಬಳಗ ಎಲ್ಲರೂ ಸೇರಿಕೊಂಡು ಮಗುವಿಗೆ ನಾಮಕರಣ ಮಾಡುತ್ತಿದ್ದರು. ಅಣ್ಣ, ತಮ್ಮ, ಅತ್ತಿಗೆ, ಸೋದರ ಮಾವ, ಭಾವ, ಮೈದುನ, ನೆಂಟರು ಮತ್ತು ಪರಿಜನರು ಮುಂತಾದವರು ಮದುವೆಯ ಸಮಯದಲ್ಲಿ ಸೇರುತ್ತಿದ್ದರು. ತಮ್ಮ ಮಗಳಿಗೆ ಒಳ್ಳೆಯ ಅಳಿಯ ಸಿಕ್ಕಿದರೆ ಅವಳ ತಂದೆಯ ಸಂತೋಷ ಹೇಳತೀರದು. ಉದಾಹರಣೆಗೆ; ಇಂತಹ ಸನ್ನಿವೇಶ ಸನತ್ಕುಮಾರ ಚಕ್ರವರ್ತಿ ಕಥೆಯಲ್ಲಿ ನಿರೂಪಿತವಾಗಿದೆ. ವಿದ್ಯಾಧರ ರಾಜನ ಮುಂದೆ ಸನತ್ಕುಮಾರನು ಯೋಗ್ಯವೆನಿಸತಕ್ಕ ವಿನಯವನ್ನು ತೋರಿಸಿದನು. ಆ ಸಂದರ್ಭ "ಮೂರು ಲೋಕಗಳಗೆಲ್ಲ ತಿಲಕದಂತೆ ಶ್ರೇಷ್ಠನಾಗಿರುವ ಅಳಿಯನನ್ನು ನಾನೇ ಪಡೆದಿದ್ದೇನೆ" ಎಂದು ಸಂತೋಷ ಪಡುವನು.

ವಡ್ಡಾರಾಧನೆಯಲ್ಲಿ ಪತಿ ಸತಿಯರ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ವಿಷಯಗಳು ವ್ಯಕ್ತವಾಗಿದ್ದು, ಸಾವಿರಾರು ಮಡದಿಯರೊಂದಿಗೆ ಸಂತೋಷದಿಂದ ಬಾಳಿದ ನಾಯಕರನ್ನು ಉದಾಹರಣೆಗಳಿವೆ. ಅವುಗಳಲ್ಲಿ; ಸುಕುಮಾರಸ್ವಾಮಿ, ಸನತ್ಕುಮಾರಸ್ವಾಮಿ, ಸುಕೌಶಳಸ್ವಾಮಿ,

ಉಪಶ್ರೇಣಿಕ ಮುಂತಾದವರು ಬಹುಪತ್ನಿತ್ವವನ್ನು ಹೊಂದಿದ್ದು, ಅಂದಿನ ಕಾಲದಲ್ಲಿ ಬಹುಪತ್ನಿತ್ವ ಪದ್ಧತಿ ರೂಢಿಯಲ್ಲಿರುವುದು ತಿಳಿದುಬರುತ್ತದೆ. ಪತಿ ಸತಿಯರ ದಾಂಪತ್ಯ ಜೀವನಕ್ಕೆ ಸಂಬಂಧಿಸಿದ ಸರಸ–ವಿರಸ ಕಾಣಬಹುದು. ಅಂತಹ ಅಂಶಗಳೆಂದರೆ; ಸಿರಿದಿಣ್ಣ ಮತ್ತು ಆತನ ಪತ್ನಿ ಸುಮತಿಯು ಚದುರಂಗ ಆಟವನ್ನು ಆಡುವ ಸನ್ನಿವೇಶ. ಗುರುದತ್ತ ಭಟಾರರ ಕಥೆಯಲ್ಲಿ ಬರುವ ಪತಿ–ಸತಿಯರು ತಮ್ಮ ಇಷ್ಟ ವಿಷಯ ಕಾಮಭೋಗಗಳಿಂದ ಸಂತೋಷವಾಗಿದ್ದರು ಎಂಬುದಕ್ಕೆ ಉದಾಹರಣೆಗೆ; "ಕುಂಣಾಳ ಮೆಂಬುದು ನಾಡಲ್ಲಿ ಸಾವಸ್ತಿಯೆಂಬುದು ಪೊೞಲದನಾಳ್ದೊನು ಉಪರಿಚರ ನೆಂಬೊನರ ಸನಾತನ ಮಹಾದೇವಿಯರ್ ಪದ್ಮವತಿ ಅಮಿತಪ್ರಭೆ, ಸುಪ್ರಭೆ, ಪ್ರಭಾವತಿ ಅಂತು ನಾಲ್ವರುಂ ಮಹಾದೇವಿಯರ್ ಮೊದಲಾಗಿ ಅರಸಿಯರ್ಕಳಯ್ನೂರ್ವರ್ ಪದ್ಮಾವತಿ ಮಹಾದೇವಿಯ ಮಗನನಂತ ವೀರ್ಯನ ಮಿತಪ್ರಭೆಯ ಮಗಂ ವಜ್ರಪಾಣಿ ಸುಪ್ರಭೆಯ ಮಗಂ ವಜ್ರಬಾಹು ಪ್ರಭಾವತಿಯ ಮಗಂ ವಜ್ರಧರನಿಂತೀ ನಾಲ್ವರುಂ ಮಹಾದೇವಿಯರ ಮಕ್ಕಳ್ ಉೞಿದರಸಿಯರ ಮಕ್ಕಳಯ್ನೂರ್ವರಂತವರ್ಗ೯ಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತ" ಕಾಲವನ್ನು ಕಳೆಯುತ್ತಿದ್ದರು ಎಂಬುದು ತಿಳಿದುಬರುತ್ತದೆ. ಪತಿ–ಸತಿ ಮತ್ತು ಮಕ್ಕಳೆಲ್ಲರೂ ಕೂಡಿಕೊಂಡು ಹೂವು, ಚಿಗುರು, ಹಣ್ಣು, ಕಾಯಿಗಳಿಂದ ತುಂಬಿದ ಉದ್ಯಾನವನದಲ್ಲಿ ವನಕ್ರೀಡೆಯಾಡಿ ನಂತರ ಅರಸ ತನ್ನ ಪತ್ನಿಯರೊಂದಿಗೆ ಪಾವಟಿಗೆಗಳುಳ್ಳ ದೊಡ್ಡದೊಂದು ಬಾವಿಯಲ್ಲಿ ಜಲಕ್ರೀಡೆಯನ್ನು ಆಡುತ್ತಿದ್ದನು ಎಂಬುದನ್ನು ತಿಳಿಯಬಹುದಾಗಿದೆ.

ಚಾಣಾಕ್ಯ ರಿಸಿಯ ಕಥೆಯಲ್ಲಿ ಪತಿ ಮತ್ತು ಮಡದಿಯರು ಪ್ರೀತಿ ವಿಶ್ವಾಸಗಳಿದ್ದರು ಎಂಬುದಕ್ಕೆ, ಸತಿಯು ಸತ್ತ ನಂತರ ಪತಿ ಕೂಡ ಸಾಯುವ ಒಂದು ಸನ್ನಿವೇಶ ಬರುತ್ತದೆ. ಚಾಣಾಕ್ಯನು ಅರಸ ಚಂದ್ರಭಕ್ತನಿಗೆ ಚಿಕ್ಕವಯಸ್ಸಿನಿಂದಲೂ ನಿರ್ದಿಷ್ಟ ಪ್ರಮಾಣದಲ್ಲಿ ದಿನಾಲು ನಂಜನ್ನು ತಿನ್ನುತ್ತಾ ಬೆಳೆಸಿದನು. ಅದರಂತೆಯೇ ಒಂದು ದಿನ ಅರಸ ತನ್ನ ಮಡದಿ ಬಸುರಿಯಾಗಿದ್ದ ಚಂದ್ರಮತಿ ಮಹಾದೇವಿ ಜೊತೆಯಲ್ಲಿ "ತನ್ನ ಕೆಯ್ಯ ತುತ್ತನರಸಂ ವಿಷವಿಶ್ರಮೆಂದಱಿಯದೆ ಕೊಟ್ಟನದನಾಕೆಬಾಯೊಳಿಟ್ಟಾಗಳೆ ಚಾಣಾಕ್ಯಂ ಕಂಡು ತಲೆಯಂ ಪೋಗಿೞಿದುಬಸಿೞಿಪೋೞ್ದು ಕೂಸಂ ಪೊಱಮಾಡಿಸುವುದಂ ಕಂಡು ಹಾ ಅಯ್ಯೋ ಎನ್ನ ಚಂದ್ರಮತಿ ಮಹಾದೇವಿ ಎನ್ನ ನಲ್ಲಳೆಯೆಂದು ಪ್ರಳಾಂಪಗೆಯ್ದು" ದು:ಖಕ್ರಾಂತನಾಗಿ ತದ್ವಿಯೋಗದಿಂದ ಚಂದ್ರಭುಕ್ತಂ ಪ್ರಾಣ ಪರಿತ್ಯಾಗಂಗೆಯ್ದು ಇದು ಪತಿ ಮತ್ತು ಸತಿಯ ಅನ್ಯೋನ್ಯ ಪ್ರೀತಿಯ ವಿಷಯಕ್ಕೆ ಸಂಬಂಧಪಟ್ಟದ್ದಾಗಿದೆ. ಇನ್ನೂ ಸತಿಯನ್ನು ಹಿಂಸಿಸುವ ರೀತಿಯು ಕಾರ್ತಿಕ ರಿಸಿಯ ಕಥೆಯಲ್ಲಿ ಕಂಡುಬರುವುದು ಅಂತಹ ಸನ್ನಿವೇಶವೆಂದರೆ; ಕ್ರೌಂಚ ರಾಜನು ತನ್ನ ಮಡದಿ ವೀರಶ್ರೀಯ ತೊಡೆಯ ಮೇಲೆ ಮಲಗಿದ್ದನು. ಆ ಸನ್ನಿವೇಶದಲ್ಲಿ ಜೈನ ಸಂನ್ಯಾಸಿಯು ಭಿಕ್ಷೆಗೆ ಬಂದಾಗ ಅವರನ್ನು ನೋಡಿದ ವೀರಶ್ರೀಯು ಸಂನ್ಯಾಸಿಗೆ ನಮಸ್ಕರಿಸಲು ಕ್ರೌಂಚರಾಜನ ತಲೆಯನ್ನು ಕೆಳಗೆ ಇಟ್ಟು ಹೋಗುವಳು ಇದನ್ನು ನೋಡಿದ ಕ್ರೌಂಚರಾಜನು ಅವಳಲ್ಲಿ ಸಂಶಯ ತಾಳಿ ಹಿಂಸಿಸಿದ ರೀತಿ ಇದು ರಾಜನ ವಿಕೃತ ಮನೋಭಾವವು ಕಂಡುಬರುವುದು.

ಮಹಿಳೆಯರ ಮೇಲೆ ದೌರ್ಜನ್ಯಗಳು ಕೇವಲ ರಾಜರು ಮತ್ತು ಶ್ರೀಮಂತರಲ್ಲಿ ನಡೆಯದೆ ಸಾಮಾನ್ಯ ಜನತೆಯಲ್ಲಿಯೂ ನಡೆಯುತ್ತಿದ್ದವು. ಉದಾಹರಣೆಗೆ; ಹಳಮುಖನೆಂಬ ರೈತ ಮಳೆ ಬಿದ್ದು ಹೊಲಕ್ಕೆ ಹೋದಾಗ ಅವನ ಮಡದಿ ಊಟ ತರಲಿಲ್ಲವೆಂದು ಹಸಿದ ಪತಿಯು ಕೋಪದಲ್ಲಿ ಮಡದಿಯನ್ನು ಬಡಿಯುವ ಚಿತ್ರ ಗುರುದತ್ತ ಭಟಾರರ ಕಥೆಯಲ್ಲಿ ಕಂಡುಬರುತ್ತದೆ. ಅದೇ ರೀತಿಯಲ್ಲಿ ಇದೇ ಕಥೆಯಲ್ಲಿ ತಾನು ಹಿಡಿದು ತಂದ ಪಕ್ಷಿಗಳನ್ನು ಬಿಟ್ಟಿದ್ದಕ್ಕೆ ಮಡದಿಯ ಮೇಲೆ ಕೋಪಗೊಳ್ಳುವ ಗರುಡವೇಗನೆಂಬ ಪುಳುಂಗಾರ "ಪಕ್ಷಿಗಳಂ ಕಾಣದೆಬಿಟ್ಟು ಕಳೆದರೆಂದುಬೆಸಗೊಂಡೊಡಾಂ ಬಿಟ್ಟು ಕಳೆದೆನೆಂದೊಡೆ ಇಂತಪ್ಪ ಧರ್ಮಾರ್ಥಿಯೆನ್ನಮನೆಯೊಳರಲ್ವೇಡೆಂದುಬಯ್ದುಪೊಯ್ದಟ್ಟಿಕಳೆದೊಂ ನೀನುಂ ಮನೆಯಿಂದಂ ಪೋಱಮಟ್ಟುಪೋಗಿ ನಂಟರಮನೆಯೊಳಿರ್ದೆಯನ್ನೆಗ" ಇಂತಹ ಅಂಶಗಳನ್ನು ತಳಸ್ಪರ್ಶಿಯಾಗಿ ಗಮನಿಸಿದಾಗ; ಅಂದಿನ ಕಾಲದಲ್ಲಿ ಪುರುಷ ಪ್ರಧಾನವಾದಂತಹ ಕುಟುಂಬ ವ್ಯವಸ್ಥೆಯು ಕಂಡುಬಂದಿದ್ದು. ಪುರುಷರ ಇಚ್ಛೆಯಂತೆ ನಡೆಯುತ್ತಿದ್ದು ಪತಿಯ ಅಭಿಲಾಷೆಗೆ ತಕ್ಕಂತೆ ಮಹಿಳೆ ವರ್ತಿಸಬೇಕಾಗಿತ್ತು. ಮಹಿಳೆಗೆ ತನ್ನ ಪತಿಯ ಆಸ್ತಿಯಲ್ಲಿಯೂ ಪಾಲು ದೊರೆಯುತ್ತಿರಲಿಲ್ಲ. "ಮಹಿಳೆಗೆ ಕೌಟುಂಬಿಕ ಜವಾಬ್ದಾರಿಗಳನ್ನು ಹೊರೆಸಿ ಅವಳಿಗೆ ಸಾಮಾಜಿಕ ಸ್ಥಾನಮಾನಗಳು ಇಲ್ಲದಂತೆ ಮಾಡಿದನು. ಮಹಿಳೆಯು ಇರುವುದೇ ತನ್ನ ಪತಿಗಾಗಿ ಮತ್ತು ಮಕ್ಕಳಿಗಾಗಿ ಎಂಬ ನಿರ್ಧಾರಕ್ಕೆ ಬಂದನು. ಹೀಗಾಗಿ ಅವಳ ಬದುಕು ಮತ್ತು ಶ್ರಮ ಆತನ ಬೇಕು ಬೇಡಿಕೆಗಳನ್ನು ನೋಡಿಕೊಳ್ಳುವುದು ಮಕ್ಕಳ ಪಾಲನೆ ಮಾಡುವುದು". ಆಸ್ತಿಯ ಜವಾಬ್ದಾರಿಯನ್ನು ಗಂಡು ಮಕ್ಕಳಿಗೆ ವಹಿಸಲಾಗಿತ್ತು. ಹಿರಿಯ ಗಂಡು ಮಕ್ಕಳಿಗೆ ರಾಜರು, ಶೆಟ್ಟಿಗಳು ತಮ್ಮ ಉತ್ತಾರಾಧಿ ಪಟ್ಟವನ್ನು ಕಟ್ಟುತ್ತಿದ್ದರು. ಗಂಡು ಮಕ್ಕಳು ಚಿಕ್ಕ ವಯಸ್ಸಿವರಾಗಿದ್ದರೆ; ಅವರ ರಕ್ಷಣೆ ಮಹಿಳೆಯರಾದಾಗಿತ್ತು. "ಸುಕುಮಾರಸ್ವಾಮಿಯೆಂಬೊಂ ಮಗನಾಗಿ ಪುಟ್ಟಿದನಾತನ ಪುಟ್ಟಿದಂದೆ ವೈರಾಗ್ಯಂ ಕಾರಣಮಾಗಿ ಸೂರದತ್ತಶೆಟ್ಟಿ ಸುಕುಮಾರಸ್ವಾಮಿಗೆ ಸೆಟ್ಟಿವಟ್ಟಂ ಗಟ್ಟಿ ತಪಂಬಟ್ಟಂ" ಇಂತಹ ವಿಷಯಗಳು ಇಲ್ಲಿ ವ್ಯಕ್ತವಾಗಿವೆ.

ವಡ್ಡಾರಾಧನೆಯಲ್ಲಿ ಸವತಿ ಮತ್ಸರ, ದಾಯಾದಿತನ, ಕುಟುಂಬದ ಸದಸ್ಯರಲ್ಲಿದ್ದ ವಿರೋಧ ಭಾವನೆ ಮುಂತಾದ ಅಂಶಗಳು ಕಂಡುಬಂದಿದ್ದು, ಸವತಿ ಮತ್ಸರಕ್ಕೆ ಸಂಬಂಧಿಸಿದ ಅಂಶಗಳೆಂದರೆ, ಸುಕೌಶಳಸ್ವಾಮಿಯ ಕಥೆಯಲ್ಲಿ ಕುಬೇರಶ್ರೀ ತನ್ನ ಪತಿ ಶ್ರೀಧರ ಇನ್ನೊಬ್ಬಳ ಜೊತೆ ಸಂಬಂಧ ಇಟ್ಟುಕೊಂಡಿದ್ದಾನೆ ಎಂದು ಅನುಮಾನ ಪಟ್ಟು ಉಪ್ಪರಿಗೆಯಿಂದ ಹಾರಿ ಪ್ರಾಣ ಬಿಡುತ್ತಾಳೆ. "ಶ್ರೀಧರಂ ಪೇೞ್ದುಂ ನಿನ್ನ ರತ್ನ ಕಂಬಳಮಂ ಪೊದೆಯ ಮನೆಗೆ ವಂದೊಡೆ ಸವತಿಯೊಳಪ್ಪ ಶಂಕೆಯಿಂದೆನ್ನ ಭಾರ್ಯೆ ಕುಬೇರಶ್ರೀ ಮಾಡದ ಮೇಗಣಿಂದಂ ತನ್ನಂ ನೆಲಕ್ಕಿಕ್ಕಿ ಬಿಟ್ಟು ಸತ್ತಳನ್ನು ಮಾಯಿರ್ದ್ದಳೆಂದು" ಸನತ್ಕುಮಾರ ಚಕ್ರವರ್ತಿಯ ಕಥೆಯಲ್ಲಿ ಬರುವ ಪ್ರತಿಮುಖನೆಂಬ ಅರಸನ ರಾಣಿಯರೆಲ್ಲರೂ ರಾಜನ ಆಸ್ಥಾನದ ವಲ್ಲಬೆಯಾದ ವಿಷ್ಣುಶ್ರೀಯನ್ನು ಯಾರಿಗೂ ಗೊತ್ತಾಗದಂತೆ ವಿಷಹಾಕಿಕೊಂದು ಸ್ಮಶಾನದಲ್ಲಿ ಇಡುವ ಸನ್ನಿವೇಶ. "ಅನಿಬರರರಸಿಯರ್ಕಳ್ನೆರೆದಂ ವಿಷಪ್ರಯೋಗದಿಂದಂ ಕೊಂದಾರು

ಮಱಿಯದಂತಿರೆ ಸ್ಮಶಾನದೋಳಿಡಾಡಿ ದೊರನ್ನೆ ಗಮರಸನು ಮಾನೆಯುಮಂ ಕಟ್ಟಿಸಿ ಬಂದರಸಿಯಂ ಕಾಣದೆಲ್ಲಿರ್ದಳೆಂದು ಬೆಸಗೊಂಡೊಂಡೆ ಸತ್ತಳೆಂಬಾ" ವೃಷಭಸೇನಾ ಭಟಾರರ ಕಥೆಯಲ್ಲಿ ಬರುವ ಅರಸನು ಜಿನದತ್ತೆಯಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದನು. ಒಂದು ದಿನ ಜಿನದತ್ತೆಯನ್ನು ಬಿಟ್ಟು ಸೋಕ್ಕಿದ ಆನೆಯನ್ನು ಹಿಡಿಯಲು ಕಾಡಿಗೆ ಅರಸನು ಹೋದಾಗ ಅರಸನ ಮೇಲೆ ಜಿನದತ್ತೆಯು ಕೋಪಗೊಂಡಿರುತ್ತಾಳೆ. ಇಂತಹ ಸನ್ನಿವೇಶವನ್ನು ನೋಡಿದ ಉಳಿದ ರಾಣಿಯರು ಇನ್ನು ಮೇಲಾದರೂ ನಮಗೆ ಪತಿಯ ಸುಖ ದೊರೆಯಲೆಂದು ಇವರು ಬಯಸುತ್ತಾರೆ. ಇಂತಹ ಉದಾಹರಣೆಗಳು ಸವತಿ ಮತ್ಸರಕ್ಕೆ ಸಂಬಂಧಪಟ್ಟ ವಿಷಯಗಳಾಗಿವೆ.

ಇಂದಿನ ಕುಟುಂಬ ವ್ಯವಸ್ಥೆಯಲ್ಲಿ ಅತ್ತೆ–ಸೊಸೆಯರ ಸಂಬಂಧದಲ್ಲಿ ಅನ್ಯೋನ್ಯ ಪ್ರೀತಿ ಹಾಗೂ ದ್ವೇಷವನ್ನು ಕಾಣಬಹುದಾಗಿದೆ. ಇದೇ ರೀತಿಯಲ್ಲಿ ವಡ್ಡಾರಾಧನೆಯಲ್ಲಿಯೂ ಅತ್ತೆ ಸೊಸೆಯರ ಪರಸ್ಪರ ಅನ್ಯೋನ್ಯ ಪ್ರೀತಿ, ವಾತ್ಸಲ್ಯಕ್ಕೆ ಸಂಬಂಧಪಟ್ಟ ವಿಷಯಗಳಿವೆ. ಉದಾಹರಣೆಗೆ ಸುಕುಮಾರಸ್ವಾಮಿಯ ಕಥೆಯಲ್ಲಿ ಸುಕುಮಾರಸ್ವಾಮಿಯ ಮಡದಿಯರು ಮೂವತ್ತೇರಡು, ಸುಕುಮಾರಸ್ವಾಮಿಯ ತಾಯಿ ಯಶೋಭದ್ರೆಯು ಸೊಸೆಯರಿಗೆ ಒಂದು ದಿನ "ಲಕ್ಷದಿನಾರಂಗಳಂ ಕೊಟ್ಟು ರತ್ನಕಂಬಳಂಗಳ್ ಕೊಂಡೋರೊಂದಱೊಳಂ ನಾಲ್ಕು ಖಂಡಮಾಗೆ ಮೂವತ್ತೆರಡು ಖಂಡಂಗಳಂ ಮಾಡಿ ಮೂವತ್ತಿರ್ವರ್ ಸೊಸೆಟಿರ್ಕಳ್ಗೆ" ಕೋಡುತ್ತಾಳೆ. ಇದರಿಂದ ಅತ್ತೆಯಾದವಳಿಗೆ ಸೊಸೆಯಂದಿರ ಬಗೆಗೆ ಇದ್ದ ಪ್ರೀತಿ ವಾತ್ಸಲದ ಬಗೆಗೆ ತಿಳಿಯುತ್ತದೆ. ಮುಂದೆ ತಾಯಿಗೆ ಮಗನ ಸಾವಿನ ಬಗೆಗೆ ತಿಳಿದಾಗ ಸುಕುಮಾರಸ್ವಾಮಿಯ ಕೊನೆಯ ದರ್ಶನ ಪಡೆಯಲು ಸೊಸೆಯಂದಿರಿಗೆ ತಾನು ನೀಡಿದ ಆಭರಣಗಳನ್ನು ಧರಿಸಿಕೊಂಡು ಬರಲು ಹೇಳುತ್ತಾಳೆ. ಅದೇ ರೀತಿಯಲ್ಲಿ ತಾಯಿಗೆ ತನ್ನ ಮಕ್ಕಳು ಕಣ್ಣ ಮುಂದೆಯೇ ಇರಲಿ ಎಂಬುದಕ್ಕೆ ಉದಾಹರಣೆ ಸನತ್ಕುಮಾರನ ಕಥೆಯಲ್ಲಿ ಕ್ಷೀರ ಕುಮಾರನಿಗೆ ವೈರಾಗ್ಯ ಉಂಟಾಗಿ ತಪಸ್ಸಿಗೆ ಹೋಗಲು ಸಿದ್ಧನಾದಾಗ ತಾಯಿಯು ಅವನನ್ನು ಹೋಗಬೇಡ ಎಂದು ತಡೆಯುತ್ತಾಳೆ. ಹಾಗೆಯೇ ತಾಯಿಗೋಸ್ಕರ ಮಗನು ತಾಯಿಯ ಇಷ್ಟ ವಿಷಯಗಳನ್ನು ಆಚರಿಸುವ ಪದ್ಧತಿಯು ಸಿರಿದಿಣ್ಣ ಭಟಾರರ ಕಥೆಯಲ್ಲಿ ಜಿತಶತ್ರು ಎಂಬಾತನು ತಾಯಿಗೋಸ್ಕರ ನಂದೀಶ್ವರ ವ್ರತವನ್ನು ಎರಡು ಸಲ ಮಾಡುವನು "ತನ್ನಂ ತಾಂ ಪೞಿದು ನಂದೀಶ್ವರದೆಂಟು ದಿವಸಮಭಿಷೇಕ ಮುಮರ್ಚನೆಯುಮ ಷ್ಟೋಪವಾಸಮುಮಂ ಮಾಡಿ ದೇವರಂ ಬಂದಿಸುತ್ತಂ ಪೂಜಿಸುತ್ತಿರ್ದಳತ್ತರಸನುಮೆಂಟು ದಿವಸಂ ಮಹಾಮಹಿಮೆಯಭಿಷೇಕಮುಮಂ ಮಾಡಿ ಸಮೆಯಸಿದ."

ಸಮರ್ಥನಾದ ಮಗನು ತಂದೆಗೆ ಇದ್ದರೆ ಸಂತೋಷಗೊಳ್ಳುವ ಸಂದರ್ಭ "ಕುಬೇರಕಾಂತಂ ಕಾಮವಿದ್ಯೆಯಿಂದಂ ಹಸ್ತ್ಯಶ್ವರಥಪದಾತಿ ಬಲಸಮೂಹ ಮನೆನಿತಾನು ಮಂವಿಭ ವೈಶ್ವರ್ಯ ಸಮನ್ವಿತಂ ತಂದೆಗೆ ತೋಱಿದೊಡೆ ತಂದೆಯುಂ ಮಗನ ಸಾಮರ್ಥ್ಯಮಂ ಕಂಡಾದಮಾನುಂ ಸಂತಸಂಬಟ್ಟಿರ್ದಂ" ಇದರಿಂದ ತಂದೆ ಮಗನ ಸಾಮರ್ಥ್ಯ ಕಂಡು ಸಂತೋಷಗೊಳ್ಳುವ ಸನ್ನಿವೇಶ ಕಂಡು ಬಂದಿದೆ.

ಕುಟುಂಬದಲ್ಲಿ ಹಿರಿಯ ಮಗನ ಬಗೆಗೆ ತಂದೆ ತಾಯಿಗಳು ವಿಶೇಷವಾದಂತಹ ಕಾಳಜಿಯನ್ನು ವಹಿಸುವರು. ಹಿರಿಯ ಮಗನು ಕಾಣದೆ ಹೋದಾಗ ಅವರ ದುಃಖ ಸಹಿಸಿಕೊಳ್ಳುವುದಿಲ್ಲ ಅಂತಹ ಒಂದು ಸನ್ನಿವೇಶ ಸನತ್ಕುಮಾರ ಚಕ್ರವರ್ತಿಯ ಕಥೆಯಲ್ಲಿ ವ್ಯಕ್ತವಾಗಿದೆ. ಸನತ್ಕುಮಾರನು ಒಂದು ದಿನ ಕುದುರೆಯ ಮೇಲೆ ವಿಹಾರಿಸುತ್ತಿದ್ದಾಗ ಕುದುರೆ ಬಹಳ ವೇಗವಾಗಿ ಓಡಿ ಅವನನ್ನು ಅರಣ್ಯದೊಳಕ್ಕೆ ತಂದು ಬಿಡುತ್ತದೆ. ತಂದೆಯಾದ ವಿಶ್ವಸೇನನಿಗೆ ಮೂರು ದಿನವಾದರೂ ಮಗನು ಕಾಣದೆ ಹೋದಾಗ ಬಹಳ ದುಃಖವಾಗುವ ಸನ್ನಿವೇಶ ಕಂಡುಬರುತ್ತದೆ.

ತಂದೆಯೊಡನೆ ಮಗನು ತಪಸ್ಸಿಗೆ ಹೊರಡುವ ಸನ್ನಿವೇಶ ಉದಾಹರಣೆಗೆ ತಂದೆಯಾದ ಪ್ರದ್ಯೋತನು ಮಗನಾದ ವೃಷಭಸೇನನು ತಪಸ್ಸಿಗೆ ತನ್ನ ಜೊತೆ ಬರಬಾರದು ಎಂದು ನುಡಿದಾಗ ವೃಷಭಸೇನನು ಮನುಷ್ಯ ಯೌವ್ವನವು, ಸಂಪತ್ತು, ಬಾಳುವೆ ಎನ್ನುವುದು

**"ಪನಿವುಲ್ಲಮುಗಿಲಸಂಜೆಯ**

**ಕನಸಿನ ಸುರ ಧನುವ ನಗೆದ ನೊರೆಗಳ ತೆಱನಂ**

**ತನಿತಂ ನಿಲ್ಲವು ಬಗೆವೊಡೆ**

**ಮನುಜರ ಯೌವನಮುಮರ್ಥಮುಂ ಬಾಳ್ಕೆಗಳುಂ"**

ಎಂದು ಹೇಳಿ ತಪಸ್ವಿಗೆ ಹೊರಡುವ ಸನ್ನಿವೇಶ ಕಂಡುಬರುತ್ತದೆ. ಕುಟುಂಬದ ಸದಸ್ಯರಲ್ಲಿ ಯಾರಿಗಾದರೂ ಸಮಸ್ಯೆ ಉಂಟಾದರೆ ಆ ಸಮಸ್ಯೆಯನ್ನು ಕುಟುಂಬದ ಸದಸ್ಯರು ಸೇರಿಕೊಂಡು ಪರಿಹರಿಸುವಂತಹ ಒಂದು ಸನ್ನಿವೇಶ ಸುಕುಮಾರಸ್ವಾಮಿಯ ಕಥೆಯಲ್ಲಿ ನಿರೂಪಿತಗೊಂಡಿದೆ. ಉದಾಹರಣೆಗೆ ಕಳ್ಳನೊಬ್ಬನು ರಾಜಶ್ರೇಷ್ಟಿಯ ಸಾವಿರ ದಿನಾರದ ಪೊಟ್ಟಣವನ್ನು ಕದ್ದಿಯುತ್ತಾನೆ. ಕದ್ದ ಕಳ್ಳನನ್ನು ಹುಡುಕಲು ತಳಾರನಿಗೆ ರಾಜನು ವಹಿಸುತ್ತಾನೆ. ಕಳ್ಳನನ್ನು ಹುಡುಕಿ ತರದಿದ್ದರೆ ಕಳ್ಳನಿಗೆ ನೀಡುವ ಶಿಕ್ಷೆಯನ್ನು ನಿನಗೆ ನೀಡುತ್ತೇನೆ ಎಂದು ಆಜ್ಞಾಪಿಸುತ್ತಾನೆ. ಅಂತಹ ಸಮಯದಲ್ಲಿ ತಳಾರನು ಚಿಂತಾಕ್ರಾಂತನಾಗುತ್ತಾನೆ, ಈ ಸಮಯದಲ್ಲಿ ತಳಾರನ ಮಗಳಾದ ಸುಮತಿಯು ಕಳ್ಳನನ್ನು ನಾನು ಹುಡುಕಿಕೊಂಡು ಬರುತ್ತೇನೆ ಎಂದು ತಂದೆಗೆ ಮಾತು ನೀಡುವ ಸನ್ನಿವೇಶವು ಕುಟುಂಬ ಸದಸ್ಯರ ಪರಸ್ಪರ ಸಹಾಯಕ್ಕೆ ಸಂಬಂಧಪಟ್ಟದಾಗಿದೆ.

ಒಂದು ಕುಟುಂಬವೆಂದರೆ; ಅಣ್ಣ – ತಮ್ಮಂದಿರು ಇದ್ದೆ ಇರುತ್ತಾರೆ. ಅಣ್ಣ ತಮ್ಮನ ಮೇಲಿನ ಮತ್ತು ತಮ್ಮ ಅಣ್ಣನ ಮೇಲಿರುವ ಪ್ರೀತಿಯನ್ನು ಕಾಣಬಹುದಾಗಿದೆ. ಅಣ್ಣನು ತಮ್ಮನ ಮೇಲಿಟ್ಟಿರುವ ಪ್ರೀತಿಯನ್ನು ಸುಕುಮಾರಸ್ವಾಮಿಯ ಕಥೆಯಲ್ಲಿ ಕಾಣಬಹುದು. ಅಗ್ನಿಭೂತಿ ಮತ್ತು ವಾಯುಭೂತಿಗೆ ವಿದ್ಯೆ ಹೇಳಿಕೊಟ್ಟ ಗುರು ಸೂರ್ಯಮಿತ್ರ ಭಟಾರರು ಅಗ್ನಿಭೂತಿಯ ಮನೆಗೆ ಬಂದು "ಭಕ್ತಿಯಿಂದಂ ನಿಚಿಸಿ ಕಾಲಂ ಕರ್ಚಿಪಡಿಗಹಮುಚ್ಚಂ ಠಾಣಮೆಂದೀವೊಂಬತ್ತು ತೞದಿಂದಂ ಪುಣ್ಯಮಂ ಕೈಗೊಂಡು ಶ್ರದ್ಧೆ ಮೊದಲಾಗೊಡೆಯ ಏೞುಂ ಗುಣಂಗಳಿಂ ಕೂಡಿ ಪ್ರಾಸುಕಮಪ್ಪಾಹಾರಮನಾದಮಾನುಂ

ಭಕ್ತಿಯಿಂದಂ ಬಡ್ಡಿಸೆಯುಂಡಿನ್ ಬಳಿಕ್ಕ ಕ್ಷಯದಾನಮೆಂದು ಪರಸಿ ಪೋಪಾಗಳ್ ಭಟ್ಟಾರಾ ನಿಮ್ಮ ಕಿಱಿಯ ಗುಡ್ಡನಂ ಪರಸಿ ಪೋಗಲ್ವೇೞ್ಕುಮೆಂದು ವಾಯುಭೂತಿಯ ಮನೆಗೊಡಗೊಂಡು ಪೋದಾಡಾತಮಂ"[16] ಇದು ತಮ್ಮನ ಶ್ರೇಯೋಭಿವೃದ್ಧಿಗೆ ಅಣ್ಣನ ಕಳಕಳಯ ವಿನಂತಿಯನ್ನು ಕಾಣಬಹುದು.

ಭಾರತೀಯ ಸಂಪ್ರದಾಯದಲ್ಲಿ ವಿವಾಹದ ಸಂದರ್ಭ ಬಂದಾಗ ಹೆಣ್ಣು ಮಕ್ಕಳನ್ನು ಬೇರೆಯವರಿಗೆ ಮದುವೆ ಮಾಡಿಕೊಡುವ ರೂಢಿ ಕಂಡುಬರುತ್ತದೆ. ಅಂತಹ ಸನ್ನಿವೇಶ ವಡ್ಡಾರಾಧನೆಯ ಕಥೆಗಳಲ್ಲಿ ನೋಡಬಹುದು. ಮದುವೆಯ ಮುಗಿದ ಮೇಲೆ ತನ್ನ ಪತಿಯ ಮನೆಗೆ ಮಗಳನ್ನು ಕಳುಹಿಸುವ ಸಮಯದಲ್ಲಿ ತಂದೆಯ ದುಃಖ ಹೇಳತೀರದು. ಸೊಸೆಯಾಗಿ ಹೋಗುವ ಮನೆ ಮಗಳ ಜೊತೆಯಲ್ಲಿ ಉಡುಗೊರೆಯನ್ನು ಕೊಟ್ಟು ಕಳುಹಿಸುವ ಸಂದರ್ಭ ಗುರುದತ್ತ ಭಟಾರರ ಕಥೆಯಲ್ಲಿ ಕಾಣಬಹುದು. ಉದಾಹರಣೆಗೆ "ಧಾತ್ರಿವಾಹನನು ಕೂಸಿಂಗೆ ತಕ್ಕ ಪೆಂಡವಾಸದ ಪಲಂಬರುಮಗ್ಗಳದ ಸೂಳೆಯರ್ಕಳುಮಂ ಕರಿಕರಿಣಿ ತುರಗಾಶ್ವರಥ ಶಿಕಾದ್ಯನೇಕ ವಾಹನಂಗಳುಮಂ ಮುತ್ತಿ ಮಾಣಿಕದ ಪೊನ್ನ ಮೂದೆಱದ ಪಲವುಂ ನಾನಾ ಪ್ರಕಾರದನರ್ಘ್ಯಮಪ್ಪ ತುಡುಗೆಗಳುಮಂ ಬಱಿವಱಿಗೊಟ್ಟರ್ವರುಮಂ ಪರಸಿಯವರ ನಾಟ್ಕಿ ಕಪೆಪಿದಂ" ಈ ರೀತಿಯಾಗಿ ಕುಟುಂಬದ ಜವಾಬ್ದಾರಿ ಹೊತ್ತ ತಂದೆಗೆ ಮಗಳ ಮೇಲಿದ್ದ ವ್ಯಾಮೋಹವನ್ನು ತಿಳಸುತ್ತದೆ. ಅದೇ ರೀತಿಯಾಗಿ ಕುಟುಂಬದಲ್ಲಿ ವಿಧವೆಯಾದ ಹೆಣ್ಣು ಮಕ್ಕಳ ಸಹಾಯಕ್ಕೆ ಅಣ್ಣಂದಿರು ಸಹಾಯಕ್ಕೆ ಬರುತ್ತಾರೆ ಎಂಬುದು ಸುಕುಮಾರಸ್ವಾಮಿಯ ಕಥೆಯಲ್ಲಿ ವ್ಯಕ್ತವಾಗಿದ್ದು ಪತಿಯನ್ನು ಕಳೆದುಕೊಂಡ ಕಾಶ್ಯಪಿಯು ತನ್ನ ಮಕ್ಕಳಾದ ಅಗ್ನಿಭೂತಿ ಮತ್ತು ವಾಯುಭೂತಿಯರು ವಿದ್ಯಾ ಕಲಿಯದೇ ಹಾಳಾಗಿ ಹೋಗುವರು ಎಂಬ ಭಯದಿಂದ ಸೋದರ ಮಾವನಾದ ಸೂರ್ಯಮಿತ್ರನಲ್ಲಿಗೆ ಒಂದು ಪತ್ರವನ್ನು ಕೊಟ್ಟು ವಿದ್ಯಾಭ್ಯಾಸಕ್ಕೆ ಕಳುಹಿಸುವಳು. ಸೂರ್ಯಮಿತ್ರನು ಇವರಿಗೆ ನಾನು ಸೋದರಮಾವ ಎಂದು ಸಲುಗೆ ನೀಡಿದರೆ; ವಿದ್ಯಾ ಕಲಿಯುವುದಿಲ್ಲ ಎಂದು ತಿಳದು ನನಗೆ ಕಾಶ್ಯಪಿ ಎಂಬ ತಂಗಿಯಿಲ್ಲ, ಆದರೂ ವಿದ್ಯೆ ಕಲಿಯಲು ಬಂದಿದ್ದಿರಿ ವಿದ್ಯೆ ಕಲಿಸುತ್ತೇನೆ ಎಂದು ಹೇಳ ಅವರಿಗೆ ವಿದ್ಯೆಯನ್ನು ಕಲಿಯಿಸಿ ಯೋಗ್ಯರನ್ನಾಗಿ ಮಾಡುತ್ತಾನೆ. ಕುಟುಂಬದಲ್ಲಿ ವಿವಾಹವಾದ ಹೆಣ್ಣು ಮಕ್ಕಳು ಗರ್ಭಿಣಿಯಾದಾಗ ಅವರ ಬಯಕೆಗಳನ್ನು ತೀರಿಸುವ ಸಂಪ್ರದಾಯ ಭಾರತೀಯ ಸಂಪ್ರದಾಯದಲ್ಲಿ ಕಂಡುಬರುತ್ತದೆ. ಅಂತಹ ಒಂದು ಸನ್ನಿವೇಶ ವಡ್ಡಾರಾಧನೆಯ ಕಥೆಯ ಸುಕುಮಾರಸ್ವಾಮಿಯ ಕಥೆಯಲ್ಲಿ ನಿರೂಪಿತಗೊಂಡಿದೆ. "ಹರಿಪುರವೆಂಬಪೊೞಲೊಳ್ ಗಂಭೀರೆಯೆಂಬೊರ್ವಳ್ ಬಿರ್ದ್ದಿಯಾಕೆಯ ಮಗಳ್ ಹರಿಣಿಯೆಂಬೊಳಾಕೆಯಂ ಜಯಂತಮೆಂಬ ಪೊೞಲೊಳ್ ವಸ್ತುದತ್ತನೆಯ ಪರದಂಗೆ ಕೊಟ್ಟೊದಾಕೆಗೆ ಗರ್ಭವಾಗಿ ಮೋದಗೆಯ ಮೇಗೆ ಬಯಕೆಯಾದೊಡೆ ತಾಯ್ ಪಲವುಂ ತೆಱದ ಲಡ್ಡುಗೆಗಳ್

ಮಂಡಗೆಗಳುಂ ಮೊದಲಾಗೊಡೆಯ ಫಲವುಂಭಕ್ಷ್ಯ ರೂಪಂಗಳುಮಂ ಕೊಂಡು ಗಂಭೀರೆಯೆಂಬ ಬಿರ್ದ್ದಿ" ಗರ್ಭಿಣಿಯ ಬಯಕೆಯನ್ನು ಕುಟುಂಬದಲ್ಲಿ ಈ ರೀತಿಯಾಗಿ ಹಿಡೇರಿಸುತ್ತಿದ್ದರು.

**ವಡ್ಡಾರಾಧನೆಯಲ್ಲಿನ ವಿವಾಹದ ಪರಿಕಲ್ಪನೆಗಳು**

ವಿವಾಹವು ಒಂದು ಪ್ರಮುಖವಾದ ಹಾಗೂ ಸಾರ್ವತ್ರಿಕ ಸ್ವರೂಪದ ಸಾಮಾಜಿಕ ಸಂಸ್ಥೆ. ಮಾನವನ ಲೈಂಗಿಕ ಜೀವನವನ್ನು ಹಾಗೂ ಲೈಂಗಿಕ ಸಂಬಂಧಗಳನ್ನು ನಿಯಂತ್ರಿಸುವುದಕ್ಕಾಗಿ ಸಮಾಜ ಸ್ಥಾಪಿತವಾದ ಸಂಸ್ಥೆಯದು. ವಿವಾಹದ ಬಗೆಗೆ ಪಾಶ್ಚಿಮಾತ್ಯರು ನೀಡಿರುವ ಒಂದೆರಡು ವ್ಯಾಖ್ಯಾನಗಳು ಹೀಗಿವೆ.

ವಿವಾಹವು ಸಂತಾನಾಪೇಕ್ಷಿಯುಳ್ಳ ಗಂಡು-ಹೆಣ್ಣುಗಳ ನಡುವೆ ಏರ್ಪಟ್ಟ ನಂಟು. ವಿವಾಹವೆಂಬುದು ಗಂಡು-ಹೆಣ್ಣುಗಳ ನಡುವಿನ ಕರಾರು ಅಥವಾ ಒಪ್ಪಂದ. ವಿವಾಹವು ಲೈಂಗಿಕ ಜೀವನ ನಡೆಸಲು ಮಾನವನಿಗೆ ನೀಡಲಾಗಿರುವ ಪರವಾನಗಿ ಇತ್ಯಾದಿ. ವಿವಾಹದ ಬಗೆಗೆ ಆಧ್ಯಾತ್ಮಿಕ ದೃಷ್ಟಿಯನ್ನು ಹೊಂದಿರುವ ಹಿಂದೂಗಳು ಅದನ್ನು 'ಒಂದು ಪವಿತ್ರವಾದ ಧಾರ್ಮಿಕ ವಿಧಿ' ಎಂದೇ ಪರಿಗಣಿಸುತ್ತಾರೆ. ಪುರುಷಾರ್ಥಗಳ ಸಾಧನೆಗಾಗಿ ವಿವಾಹದ ಮೂಲಕ 'ಗೃಹಸ್ಥಾಶ್ರಮ'ವನ್ನು ಸ್ವೀಕರಿಸುವುದು ಅವಶ್ಯವಾದ ಮತ್ತು ಪವಿತ್ರವಾದ ಕಾರ್ಯ ಎಂಬುದಾಗಿ ಹಿಂದೂ ಶಾಸ್ತ್ರಕಾರರು ಬಹಳ ಹಿಂದೆಯೇ ಸಾರಿ ಹೇಳಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ; ಪಾಶ್ಚಿಮಾತ್ಯರಿಗಿಂತಲೂ ಪೌರಾತ್ಯರು ವಿವಾಹಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾರೆ. ಪೂರ್ವ ಪಶ್ಚಿಮಗಳ ನಡುವಿನ ಜೀವನ ಶೈಲಿ ಹಾಗೂ ಜೀವನ ದೃಷ್ಟಿಗಳಲ್ಲಿನ ವ್ಯತ್ಯಾಸವು ವೈವಾಹಿಕ ಆಚರಣೆಯಲ್ಲಿಯೂ ಎದ್ದು ಕಾಣುವುದು.

ಪ್ರಾಚೀನ ಭಾರತದಲ್ಲಿ ಬ್ರಹ್ಮ ವಿವಾಹ, ದೈವವಿವಾಹ, ಆರ್ಶವಿವಾಹ, ಪ್ರಜಾಪತ್ಯ ವಿವಾಹ, ಅಸುರ ವಿವಾಹ, ಗಾಂಧರ್ವ ವಿವಾಹ, ರಾಕ್ಷಸ ವಿವಾಹ ಮತ್ತು ಪೈಶಾಚ ವಿವಾಹ ಎಂಬ ಎಂಟು ಬಗೆಯ ವಿವಾಹ ಪದ್ಧತಿಗಳು ರೂಢಿಯಲ್ಲಿದ್ದವು. ಈ ಎಂಟು ಬಗೆಯ ವಿವಾಹಗಳು ಧರ್ಮ ಸೂತ್ರ, ಗೃಹಸೂತ್ರಗಳಲ್ಲಿ ನಿರೂಪಿತವಾಗಿವೆ". ವಡ್ಡಾರಾಧನೆಯ ಕಥೆಗಳಲ್ಲಿ ಸ್ವಯಂವರ ಮತ್ತು ಗಾಂಧರ್ವ ವಿವಾಹಗಳ ಪ್ರಸ್ತಾಪ ಬಂದಿದೆ. ವಿವಾಹದ ಸಮಯದಲ್ಲಿ ವಧುವರರಿಗೆ "ಪಾಣಿ ಗ್ರಹಣ ಅಂದರೆ; ವರನು ವಿವಾಹದ ಸಮಯದಲ್ಲಿ ಕನ್ಯೆಯ ಕೈಯನ್ನು ತನ್ನ ಕೈಯಿಂದ ಹಿಡಿದುಕೊಳ್ಳುವ ವಿಧಿ. ಅದಕ್ಕೆ ಕೈಹಿಡಿಯುವ ಹೋಮ ಎನ್ನುತ್ತಾರೆ" ಮತ್ತು ಕಂಕಣ ಕಟ್ಟುವ ಪದ್ಧತಿಗಳ ಪ್ರಸ್ತಾಪವಿದೆ.

ಬಾಲ್ಯ ವಿವಾಹ ಪದ್ಧತಿಯು ವಡ್ಡಾರಾಧನೆ ಕಥೆಗಳಲ್ಲಿ ಕಂಡುಬರುತ್ತವೆ. ಅಂದರೆ ಮಗು ಗರ್ಭದಲ್ಲಿರುವಾಗಲೇ ಇಂಥವರಿಗೆ ಕೊಟ್ಟು ಮದುವೆ ಮಾಡುತ್ತೇವೆ ಎಂಬ ಅಂಶ ಸುಕುಮಾರಸ್ವಾಮಿಯ ಕಥೆಯಲ್ಲಿ ಕಂಡುಬರುತ್ತದೆ. ಮತ್ಸ್ಯ ಎಂಬ ವರ್ತಕ ಹಾಗೂ ಆತನ ಮಡದಿ ವಸುದತ್ತೆ ಇವರ ಮಗಳು ಮೋದಾಳ ಗರ್ಭದಲ್ಲಿರುವಾಗಲೇ ಸೋದರ ಮಾವನ ಮಗ ನಂದನಿಗೆ ವಿವಾಹ ಮಾಡುವುದಾಗಿ ನಿರ್ಧರಿಸಿದರು. ನಂದನು ಹಣ ಸಂಪಾದನೆ ಮಾಡಿ ಬರುವುದಾಗಿ, ಬರುವುದು ಹನ್ನೆರಡು

ವರ್ಷಗಳಾಗುವುದು ಒಂದು ವೇಳೆ ಬರದಿದ್ದರೆ "ಕಿಱೆಯ ತಮ್ಮಂ ಬೋದಂಗೆ ಕೂಸಂ ಕುಡಿಮೆಂದು ಪೇೞ್ದು" ಮೊದಾಳಿಯನ್ನು ತಮ್ಮನಿಗೆ ಕೊಟ್ಟು ಮದುವೆ ಮಾಡಿ ಎಂದು ಹೇಳಿ ಹೊರಡುವ ಸನ್ನಿವೇಶ, ಹಾಗೆಯೇ ಸನತ್ಕುಮಾರ ಕಥೆಯಲ್ಲಿ "ಅಯೋಧ್ಯಾಪುರ ಮನಾಳ್ವೊಂ ಸುರಥನೆಂಬೊನ ರಸನಾತನ ಮಹಾದೇವಿ ಚಂದ್ರಯಾಯೆಂಬೊಳಾಯಿರ್ವರ್ಗ್ಗಂ ಪುಟ್ಟಿದೆಂ ಸುನಂದಯೆಂಬೆಂ ಸನತ್ಕುಮಾರಂಗೆ ಗರ್ಭದೊಳಿರ್ದ್ದಂತೆನಿವೇದಿಸಪಟ್ಟೆ ನೆನ್ನಂ" ಇಂಥಹ ಸನ್ನಿವೇಶವನ್ನು ಕಾಣಬಹುದು. ಅದೇ ರೀತಿಯಾಗಿ ಸುಕೌಶಳಸ್ವಾಮಿಯ ಕಥೆಯಲ್ಲಿ ಸುಕೌಶಳಸ್ವಾಮಿ ಹದಿನಾಲ್ಕು ವರ್ಷದವನಾಗಿದ್ದಾಗ ಮದುವೆ ಮಾಡುವುದು ಕಂಡುಬರುತ್ತದೆ. "ಪದಿನಾಱುಂ ವರುಷಂಬೋಗಿ ಯೌವನವಾದೊಡೆ ಮೂವತ್ತಿರ್ವ್ವರಸು ಮಕ್ಕಳ ಕೂಸುಗಳನತ್ಯಂತ ಲಾವಣ್ಯ ಸೌಭಾಗ್ಯಕಾಂತಿ ಹಾವಭಾವವಿಲಾಸ ವಿಭ್ರಮಂಗಳಂ ಕೂಡಿದೊರಂ ಬೇಡಿಯೊಂದೆ ಪಸೆಯೊಳ್ ಮದುವೆ ನಿಱಿಸಿದಳ್" "ಮದುವೆ ಕೊಡುಗೂಸಿನಲ್ಲಿ ಸುಂದರವೆಂಬ ಭಾವನೆ ಅಂದಿನ ಜನರದ್ದಾಗಿತ್ತು".

ಇಂತಹ ಹಲವಾರು ವಿಷಯಗಳು ಬಾಲ್ಯ ವಿವಾಹಕ್ಕೆ ಸಂಬಂಧಪಟ್ಟವುಗಳಾಗಿದ್ದರೆ, ಇನ್ನು ಯೌವ್ವನಾವಸ್ಥೆಗೆ ಬಂದ ನಂತರ ಮದುವೆಯಾಗುವ ರಾಜರ, ಶ್ರೀಮಂತರ ಮತ್ತು ಸಾಮಾನ್ಯ ಜನತೆಯ ವಿವಾಹಗಳು ವಡ್ಡಾರಾಧನೆಯಲ್ಲಿ ಸಾಕಷ್ಟು ಕಂಡುಬರುತ್ತವೆ. ಅಂತಹವುಗಳೆಂದರೆ; ಸುಕೌಶಳಸ್ವಾಮಿಯ ಕಥೆಯಲ್ಲಿ ಸಿದ್ದಸೇನನು ಸುಕೇಶಿನಿಯೆಂಬ ಕನ್ಯೆಯನ್ನು ಅವರ ತಂದೆ ತಾಯಿಯಿಂದ ಬೇಡಿಕೊಂಡು ಮದುವೆ ಆಗುವ ಸನ್ನಿವೇಶ. "ತಮ್ಮಂವರಾಂಗನೆಂಬೊನಾತನ ಮಗಂ ಜಿತರಂಗನೆಂಬೊನೆನ್ನ ಸೋದರಳಿಯನಾತಂಗೆ ಕೊಟ್ಟಪೆನೆಂದು ಪೇೞ್ದೊಡರಸಂ ಮಧುಸೇನಂ ಮಧೂಸೂದನ ರೆಂಬಿರ್ವರ್ ಪ್ರಧಾನ ವೆರ್ಗಡೆಗಳಂ ನಾಗದತ್ತನ ಮನೆಗೆಪೋಗಿ ಕೂಸಂ ಬೇಡಪೇತ್ತಂ ನಾಗದತ್ತನು ಮಷ್ಟಾಹ್ನಿರ್ ಮಹಾಮಹಿಮೆಯನೆಂಟು ದಿವಸಂ ಮಾಡಿ ಪ್ರಶಸ್ತ, ದಿನ, ವಾರ, ನಕ್ಷತ್ರ, ಮುಹೂರ್ತ, ಹೋರಾಲಗ್ನದೊಳ್ ಕೂಸಿನನು ಕುಲದೊಳ್ ಪಾಣಿಗ್ರಹಣ ಪುರಸ್ಸರ ಸುಕೇಶಿನಿಯಂ ಗಂಧಭಾಜನನೆಂಬ ರಸಂಗೆ ಕೊಟ್ಟನಿಂತು ಮಹಾವಿಭೂತಿಯಿಂದಂ ಮದುವೆ ನಿಂದು ಗಂಧಭಾಜನ ನೃಪತಿಯಂ ಸುಕೇಶಿಯೊಳಿಷ್ಟ ವಿಷಯ ಕಾಮ ಭೋಗಂಗಳಂ ಪಲಕಾಲಮನುಭವಿಸುತ್ತಿರೆ." ಈ ರೀತಿ ಕನ್ಯೆಯ ತಂದೆ-ತಾಯಿಗಳ ಒಪ್ಪಿಗೆಯನ್ನು ಪಡೆದು ವಾರ, ನಕ್ಷತ್ರ, ದಿನದ ಮುಹೂರ್ತದಲ್ಲಿ ಮದುವೆಯಾಗುತ್ತಿದ್ದನ್ನು ಕಾಣಬಹುದಾಗಿದೆ. ಅದೇ ರೀತಿ ಇಂದಿನ ಸಮಾಜದಂತೆ ಕಂಕಣ ಕಟ್ಟಿಕೊಂಡು ಮದುವೆಯಾಗುವ ಪದ್ಧತಿಯು ಇದೇ ಕಥೆಯಲ್ಲಿ ಬಂದಿದೆ. ಉದಾಹರಣೆಗೆ "ಕುಬೇರ ಕಾಂತನೊಳನಿಬರುಂ ನೆರೆದು ಯುದ್ಧಂಗೆಯ್ದೊಡೆ ಸಂಗ್ರಾಮರಂಗದೊಳ್ ಸುವರ್ಮ್ಮವಮ್ಮಂ ಮೊದಲಾಗೊಡೆಯರ್ಕಳೆಲ್ಲರುಮಂ ಗೆಲ್ದು ಮನೋಹರಿಯಂ ಪ್ರಾಣಿ ಗ್ರಹಣ ಪುರಸ್ಸರಂ ಮದುವೆನಿಂದು ಸೊಪಾರಕ್ಕಧಿಪತಿಯಾಗಿರ್ದ್ದನ್." ಹಾಗೆಯೇ ಮದುವೆಗಳು ರಾತ್ರಿಯ ಸಮಯದಲ್ಲಿ ನಡೆಯುತ್ತಿದ್ದವು ಎಂಬುದಕ್ಕೆ ಸನತ್ಕುಮಾರ ಚಕ್ರವರ್ತಿ ಕಥೆಯಲ್ಲಿ ಅರಸ ಸುರಥ ಮತ್ತು ಚಂದ್ರಯಶಿರ ಮಗಳಾದ

ಸುನಂದೆಯನ್ನು ಹರಿಕೂಟವೆಂಬ ಪರ್ವತದ ಜ್ಯೋತಿರ್ವನದಲ್ಲಿ ಮಾಯೆಯಿಂದ ಸೃಷ್ಟಿ ಮಾಡಿದ ಮದುವೆಯಲ್ಲಿ "ಲತಾಮಂಟಪ ಮುಮಂನೋಡಿ ಎನಗಿದು ಮಹಾ ವಿಸ್ಮಯಂ ರಾತ್ರಿಯೋಳ್ ವಿವಾಹ ಕಲ್ಯಾಣಮೆನಗೆ ಸ್ವಪ್ನದೊಳಾದದೊ ನಿರುತಮೋ ಎಂದು ಸಂದೇಹ ಚಿತ್ತನಾಗಿ ತನ್ನ ಕೈಯೊಳ್ ಕಟ್ಟಿದ ಕಂಕಣಮಂ ನೋಡಿ ಕಂಡು ಕುಮಾರ" ಇಂತಹ ಉದಾಹರಣೆಗಳು ಅರಸರು ಶ್ರೀಮಂತರ ಮತ್ತು ಸೆಟ್ಟಿಯರ ಹೆಣ್ಣು ಮಕ್ಕಳನ್ನು ಮದುವೆಯಾಗುತ್ತಿದ್ದ ಸನ್ನಿವೇಶಗಳನ್ನು ವಡ್ಡಾರಾಧನೆ ಕಥೆಗಳಲ್ಲಿ ನೋಡಬಹುದಾಗಿದೆ.

ಪ್ರಾಚೀನ ಕಾಲದಲ್ಲಿ ವಿವಾಹವು ಸ್ವಯಂವರ ಪದ್ಧತಿಯಲ್ಲಿ ನಡೆಯುತ್ತಿದ್ದವು. ಅಂದರೆ ಹೆಣ್ಣು ಮಕ್ಕಳು ತಮಗೆ ಇಷ್ಟವಿದ್ದ ವರನನ್ನು ಮದುವೆಯಾಗುವುದು ರೂಢಿಯಲ್ಲಿತ್ತು. ಇಂತಹ ಸನ್ನಿವೇಶಗಳು ವಡ್ಡಾರಾಧನೆಯ ಕಥೆಗಳಲ್ಲಿ ಕಂಡುಬಂದಿದೆ. "ಶ್ರೀಯಾ ದೇವತೆಯಮಗನಾದಸಿರಿದಿಣ್ಣನು ಸಾಕೇತವೆಂಬ ಪಟ್ಟಣದ ಒಡೆಯನಾದ ಸುಮಂತ ರಾಜನ ಮಗಳಾದ ಸುಮತಿಯು ಸ್ವಯಂವರದಲ್ಲಿ ಸ್ವಯಂವರಕ್ಕೆ ಆಗಮಿಸಿದ ರಾಜಕುಮಾರರೆಲ್ಲರನ್ನು ಬಿಟ್ಟು ಸಿರಿದಿಣ್ಣನಿಗೆ ವರಣ ಮಾಲಿಕೆಯನ್ನು ತೋಡಿಸುತ್ತಾಳೆ." ಇಂತಹ ಸ್ವಯಂವರವು ರಾಜ–ಮಹಾರಾಜರ ಮನೆಗಳಲ್ಲಿ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ರಾಜನ ಮಗಳು ತನಗೆ ಇಷ್ಟಬಂದವರನ್ನು ಸ್ವಯಂವರದಲ್ಲಿ ವಿವಾಹವಾಗುವ ಪದ್ಧತಿ ರೂಢಿಯಲ್ಲಿತ್ತು ಎಂದು ಹೇಳಬಹುದು.

ಗಂಡು–ಹೆಣ್ಣು ಮೆಚ್ಚಿಕೊಂಡು ನಡೆಯುತ್ತಿದ್ದಂತಹ ಗಾಂಧರ್ವ ವಿವಾಹ ಪದ್ಧತಿಯು ವಡ್ಡಾರಾಧನೆಯಲ್ಲಿ ಕಂಡುಬರುತ್ತವೆ. ಉದಾಹರಣೆಗೆ ಸನತ್ಕುಮಾರ ಚಕ್ರವರ್ತಿಯ ಕಥೆಯಲ್ಲಿ "ಸಂಧ್ಯಾವಳಿಯು ಸುನಂದೆಯನ್ನು ಸನತ್ಕುಮಾರನಿಗೆ ಮದುವೆ ಮಾಡಿಕೊಟ್ಟಳು. ಈ ರೀತಿಯಾದ ಪರಸ್ಪರ ಸಂಬಂಧದಿಂದ ಗಾಂಧರ್ವ ವಿವಾಹ ಕ್ರಮದಿಂದ ಅವರು ಮಂಗಳದಲ್ಲಿ ಕೂಡಿ ಸುಖದಿಂದ ಇದ್ದರು." ಅದೇ ರೀತಿಯಲ್ಲಿ ಚಿಲಾತಪುತ್ರನ ಕಥೆಯಲ್ಲಿ ಗುಣಸುಂದರಿಯು ಉದ್ಯಾನವನದಲ್ಲಿ ಕ್ರೀಡೆಯನ್ನಾಡುತ್ತಿದ್ದಾಗ ಉಪಶ್ರೇಣಿಕನನ್ನು ಕಂಡು ಅವನಲ್ಲಿ ಮೋಹಗೊಂಡು "ನೀನಲ್ಲದೆನನಗೆಬೇರೆ ಪುರುಷರು ಯಾರು ನಂಟಾಗಲಾರರು" ಎಂದು ಒಂದು ಪತ್ರವನ್ನು ಬರೆದು ಉಪಶ್ರೇಣಿಕ ಇರುವ ಕಡೆ ಇಟ್ಟು ಹೋಗುವಳು ಇದರಿಂದ ಅವಳ ಮನಸ್ಸಿನಲ್ಲಿರುವ ಪ್ರೀತಿಯನ್ನು ಕಾಣಬಹುದು. ಗುರುದತ್ತ ಭಟಾರರ ಕಥೆಯಲ್ಲಿ ಕನಕಚಿತ್ರೆ ಎಂಬ ಕನ್ಯೆಯು ಒಂದು ದಿವಸ ದೊಡ್ಡ ಕಾಡಿನಲ್ಲಿ ವಿದ್ಯಾ ಸಾಧನೆ ಮಾಡುತ್ತಿದ್ದಳು. ಅವಳ ರೂಪ ಲಾವಣ್ಯವನ್ನು ನೋಡಿದ ವಿಧ್ಯಾಧರನು ಅವಳ ಮೇಲೆ ಮೋಹಗೊಂಡು "ನೀನೆನಗೆ ಪೆಂಡತಿಯಾಗೆಂದು ಕೈಯಂ ಪಿಡಿದು ಕಾಡುತ್ತಿರ್ಪನ್ನೆಗಂ" ಇದರಿಂದ ಅಂದಿನ ಕಾಲದ ಗಾಂಧರ್ವ ವಿವಾಹಗಳು ಇಂದಿನ ಕಾಲದಲ್ಲಿ ಇರುವಂತೆ ಒಬ್ಬರನೊಬ್ಬರು ಪರಸ್ಪರ ಪ್ರೀತಿಸಿ ಮದುವೆಯಾಗುವ ರೀತಿಯಲ್ಲಿಯೇ ಅಂದಿನ ಕಾಲದಲ್ಲಿಯು ಸಹ ಪರಸ್ಪರ ಪ್ರೀತಿಸಿ ಮದುವೆಯಾಗುವ ಉಲ್ಲೇಖಗಳು ಈ ಕೃತಿಯಲ್ಲಿ ವ್ಯಕ್ತವಾಗಿವೆ. ಹಾಗೆಯೇ ತಂದೆ ತಾಯಿಯರು ತಮ್ಮ ಮಗಳನ್ನು

ಇಷ್ಟಪಟ್ಟನಿಗೆ ಕೊಡದಿದ್ದಾಗ ಯುದ್ದದಿಂದ ಹೋರಾಡಿ ಅವಳನ್ನು ಮದುವೆಯಾಗುವ ಸನ್ನಿವೇಶಗಳು ಈ ಕೃತಿಯಲ್ಲಿ ವ್ಯಕ್ತವಾಗಿವೆ. ಉದಾಹರಣೆಗೆ ಗುರುದತ್ತ ಭಟಾರರ ಕಥೆಯಲ್ಲಿ ಧಾತ್ರಿವಾಹನನ ಮಗಳಾದ ಅಭಯಮತಿಯನ್ನು ಗುರುದತ್ತನ್ನು ಮದುವೆಯಾಗಲು ಬಯಸಿ ಆಕೆಯನ್ನು ಕೊಡುವಂತೆ ಎಷ್ಟೋ ಬಾರಿ ಜನರನ್ನು ಕಳುಹಿಸಿದರು ಧಾತ್ರಿವಾಹನ ಒಪ್ಪುವುದಿಲ್ಲ. ಅದೇ ಸಂದರ್ಭದಲ್ಲಿ ವಿಶ್ವಕರ್ಮನನ್ನು ಧಾತ್ರಿವಾಹನನು ಕೊಲ್ಲಲು ಆಜ್ಞಾಪಿಸಿದಾಗ ಹೆದರಿ ಗುರುದತ್ತನಲ್ಲಿಗೆ ಹೋಗಿ ಆಶ್ರಯ ಪಡೆಯುವನು ಧಾತ್ರಿವಾಹನನು ವಿಶ್ವಕರ್ಮನನ್ನು ಕಪ್ಪ ಸಮೇತ ಕಳುಹಿಸಿ ಕೊಡಲಿ ಎಂದು ಧೂತರಿಗೆ ಹೇಳುವನು ಇದರಿಂದ ಕೋಪಗೊಂಡ ಗುರುದತ್ತನು ಈ ರೀತಿ ಹೇಳುವನು. "ನಿಮ್ಮೊಡೆಯನಿಗೆ ಹೇಳಿ ತನ್ನ ಮಗಳಾದ ಅಭಯಮತಿ ಕನ್ಯೆಸಮೇತ ತನ್ನ ಪಟ್ಟದಾನೆಯನ್ನು ಶ್ರೇಷ್ಠವಸ್ತು ವಾಹನವನ್ನು ಬೇಗ ಕಳುಹಿಸಿಕೊಡಲಿ, ಕಳುಹಿಸದಿದ್ದರೆ ಅವನ ತಲೆಸಹಿತವಾಗಿ ಅವನನ್ನು ತೆಗೆದುಕೊಳ್ಳುತ್ತೇನೆ." ಇದರಿಂದ ಅಭಯಮತಿಯು ನನಗಾಗಿಯೇ ಯುದ್ಧ ನಡೆಯುತ್ತಿರುವುದನ್ನು ತಿಳಿದು ಯುದ್ಧ ನಿಲ್ಲಿಸುವಂತೆ ಅವಳ ತಂದೆಗೆ ಈ ರೀತಿಯಾಗಿ ಹೇಳುವಳು."ಎನ್ನಂ ಗುರುದತ್ತಂಗೆ ಕಂಡುವೊಡೆ ಕುಡುಗೆಯುಳಿದಪುರುಷರ್ಕಳೆಲ್ಲಂ ಮೊಚಿಯಲ್ಲದವರೆನಗೆ ತಮ್ಮ ಮೆಚ್ಚಲ್ಲದಾಳೀಗಳೆ ತಪಂ ಬಡುವೆನ್". ಈ ರೀತಿಯಾಗಿ ಮಗಳು ಹೇಳಿದ ಮಾತಿಗೆ ಒಪ್ಪಿಗೆ ನೀಡಿ ಯುದ್ಧವನ್ನು ನಿಲ್ಲಿಸಿ ಗುರುದತ್ತನಿಗೆ ಮಗಳನ್ನು ವಿವಾಹ ಮಾಡಿಕೊಡುವನು.

ತಂದೆ-ತಾಯಿಗಳು ಸಂಬಂಧಿಕರಲ್ಲಿಯೇ ಮಗಳನ್ನು ಮದುವೆ ಮಾಡಿಕೊಡುವ ಪದ್ಧತಿಯು ಇಂದಿನ ಕಾಲದಲ್ಲಿರುವಂತೆಯೇ ಪ್ರಾಚೀನ ಕಾಲದಲ್ಲಿಯೂ ಸಹ ರೂಢಿಯಲ್ಲಿತ್ತು. ಅಂತಹ ಒಂದು ಉಲ್ಲೇಖ ವಡ್ಡಾರಾಧನೆ ಕಥೆಯ ಸುಕೌಶಳಸ್ವಾಮಿಯ ಕಥೆಯಲ್ಲಿ ವ್ಯಕ್ತವಾಗಿದೆ. ಅಂದರೆ ಗಂಧಭಾಜನ ರಾಜನು ಸುಕೇಶಿನಿಯ ಮೇಲೆ ಆಸೆಪಟ್ಟು ಧೂತರನ್ನು ತಾಯಿಯ ಬಳಿ ಕಳುಹಿಸುವನು ಮಗಳನ್ನು ಯಾರಿಗೆ ಕೊಡುವಿರಿ ಎಂದಾಗ "ತಮ್ಮಂವರಾಗನೆಂಬೊನಾತನ ಮಗಂ ಜಿತರಂಗನೆಂಬೊ ನೆನ್ನ ಸೋದರಳಿಯನಾ ತಂಗೆ ಕೊಟ್ಟ**ವೆ**ನೆಂದು" ಹೇಳುವ ಸನ್ನಿವೇಶ ಕಂಡುಬರುತ್ತದೆ. ಅದೇ ರೀತಿಯಾಗಿ ಚಿಲಾ**ತ**ಪುತ್ರನ ಕಥೆಯಲ್ಲಿ ಬಾಲ್ಯದಲ್ಲಿಯೇ ಸೋದರ ಮಾವನಾದ ರುದ್ರಮಿತ್ರನು ತನ್ನ ಮಗಳಾದ ಸುಭದ್ರೆಯನ್ನು ಭಟ್ಟಿಮಿತ್ರನಿಗೆ ಕೊಡುತ್ತೇನೆ ಎಂದು ಹೇಳಿ ಮಗಳನ್ನು ಬೇರೆಯವರಿಗೆ ಕೊಟ್ಟು ಮದುವೆ ಮಾಡಲು ಮುಂದೆ ಬರುವನು ಇದನ್ನು ವಿರೋಧಿಸಿ ಭಟ್ಟಮಿತ್ರನು ರಾಜನಾದ ಚಿಲಾತಪುತ್ರನಲ್ಲಿ ದೂರು ನೀಡುವನು ಆಗ ಚಿಲಾತಪುತ್ರನು ಐನೂರು ಮಂದಿ ಯೋಧರೊಡನೆ ಬಂದು ಕನ್ಯೆಯನ್ನು ಮದುವೆ ಮಂಟಪದಿಂದ ಎಳೆದುಕೊಂಡು ಹೋಗುವನು ಇದರಿಂದ ರುದ್ರಮಿತ್ರನು ಮಹಾರಾಜನಿಗೆ ದೂರು ಕೊಡುವನು. ಮಹಾರಾಜನು "ಅನ್ಯಾಯದಲ್ಲಿ – ವರ್ತಿಸಿದವನನ್ನು ಕೊಂದು ಕನ್ಯೆಯನ್ನು ಕೊಂಡು ತನ್ನಿ" ಎಂದನು. ಈ ಆಜ್ಞೆಯಿಂದ ಚಿಲಾತಪುತ್ರನ್ನು ದಿಕ್ಕು ಕಾಣದೇ ಆ ಕನ್ಯೆಯನ್ನು ಕೊಂದು ಬಿಡುವನು. ಇಂತಹ ದುರ್ಘಟನೆಯ ಸನ್ನಿವೇಶವು ಈ ಕಥೆಯಲ್ಲಿ ಕಂಡುಬರುವುದು.

ಒಟ್ಟಾರೆಯಾಗಿ ಹೇಳುವುದಾದರೆ, ವಡ್ಡಾರಾಧನಕಾರ ಅಂದಿನ ಕಾಲಘಟ್ಟದಲ್ಲಿ ಕಂಡುಬರುವ ಕುಟುಂಬ ವ್ಯವಸ್ಥೆಯಲ್ಲಿ ಅರಸನಿಂದ ಶ್ರೀಸಾಮಾನ್ಯವರೆಗೂ ಕುಟುಂಬದಲ್ಲಿ ಕಂಡುಬಂದಿರುವ ಅಂಶಗಳನ್ನು ಗುರುತಿಸಿದ್ದಾನೆ. ಕುಟುಂಬವು ಒಂದು ಸಾರ್ವತ್ರಿಕವಾದ ಸಂಸ್ಥೆಯಾಗಿದೆ. ಅದರಲ್ಲಿ ವಿವಾಹವು ಮನುಷ್ಯ ಜೀವನದ ಪ್ರಮುಖ ಭಾಗವಾಗಿದೆ. ಪ್ರಾಚೀನ ಭಾರತದಲ್ಲಿ ಬ್ರಹ್ಮ ವಿವಾಹ, ದೈವವಿವಾಹ, ಆರ್ಶವಿವಾಹ, ಪ್ರಜಾಪತ್ಯ ವಿವಾಹ, ಅಸುರ ವಿವಾಹ, ಗಾಂಧರ್ವ ವಿವಾಹ, ರಾಕ್ಷಸ ವಿವಾಹ ಮತ್ತು ಪೈಶಾಚ ವಿವಾಹ ಎಂಬ ಪದ್ಧತಿಗಳು ರೂಢಿಯಲ್ಲಿದ್ದವು. ಅಂದಿನ ಕಾಲದಲ್ಲಿ ಕೆಲವು ವಿವಾಹವು ಸ್ವಯಂವರ ಪದ್ಧತಿಯಲ್ಲಿ ನಡೆಯುತ್ತಿದ್ದವು. ಅಂದರೆ ಹೆಣ್ಣು ಮಕ್ಕಳು ತಮಗೆ ಇಷ್ಟವಿದ್ದ ವರನನ್ನು ಮದುವೆಯಾಗುವುದು ರೂಢಿಯಲ್ಲಿತ್ತು. ಮತ್ತು ತಂದೆ-ತಾಯಿಗಳು ಸಂಬಂಧಿಕರಲ್ಲಿಯೇ ಮಗಳನ್ನು ಮದುವೆ ಮಾಡಿಕೊಡುವ ಪದ್ಧತಿಯು ಇಂದಿನ ಕಾಲದಲ್ಲಿರುವಂತೆಯೇ ಪ್ರಾಚೀನ ಕಾಲದಲ್ಲಿಯೂ ಸಹ ರೂಢಿಯಲ್ಲಿತ್ತು.

**ಗ್ರಂಥಋಣ**

1. ಡಾ.ಡಿ.ಎಲ್.ನರಸಿಂಹಚಾರ್, ಶಿವಕೋಟ್ಯಾಚಾರ್ಯರ ವಿರಚಿತ ವಡ್ಡಾರಾಧನೆ

2. ಶೈಲಜಾ ಹಿರೇಮಠ, ಜನಪದ ಸಾಹಿತ್ಯ : ಮಹಿಳಾ ಸಂಸ್ಕೃತಿ

3. ಎಂ.ನಂಜಮ್ಮಣ್ಣಿ, ಭಾರತೀಯ ಸಾಮಾಜಿಕ ಸಂಸ್ಥೆಗಳು

4. ಚ.ನ.ಶಂಕರರಾವ್, ಭಾರತೀಯ ಸಮಾಜ ಅಧ್ಯಯನ

5. ಆರ್.ಶಾಮಶಾಸ್ತ್ರೀ, ಧರ್ಮಾಮೃತಂ